ಶ್ರೀ ಮಲ್ಲಿಕಾರ್ಜುನ ಖರ್ಗೆ.—ತಾವು (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದ್ದೇನೆ. ತಾವು ಇದರ ಬಗ್ಗೆ ಕೊಟ್ಟಿರುವ ಪಟ್ಟಿಯಲ್ಲಿ ಕೆಲಸದ ಬಗ್ಗೆ ಮತ್ತು ಖರ್ಚಿನ ಬಗ್ಗೆ ನೋಡಿದರೆ ಅರ್ಧ ಭಾಗಯಾದಗಿರಿ ಕ್ಷೇತ್ರಕ್ಕೆ ಸೇರಿರುತ್ತದೆ, ಅರ್ಧ ಭಾಗ ಗುರುಮಿಟಕಲ್ ಕ್ಷೇತ್ರಕ್ಕೆ ಸೇರಿರುತ್ತದೆ. ಗುರು ಮಿಟ್ಕಲ್ ಕ್ಷೇತ್ರಕ್ಕೆ ಯಾವ ಯಾವುದು ಸೇರಿರುತ್ತದೆ ಎನ್ನುವುದು ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳಿಗೆ ಗೊತ್ತಿಲ್ಲದೇ ಹೋದರೆ ನನ್ನ ಗತಿ ಏನಾಗಬೇಕು ? ಇದರಲ್ಲಿ ಕೊಟ್ಟಿರುವ ದೂಪಳ್ಳಿ ವಿಲೇಜ್ ನನ್ನ ಕ್ಷೇತ್ರಕ್ಕೆ ಸೇರಿಲ್ಲ. ಹಾಗೆಯೇ ಬಂಡೇಪಲ್ಲಿ ವಿಲೇಜ್ ಕೂಡ ನನ್ನ ಕ್ಷೇತ್ರಕ್ಕೆ ಸೇರಿಲ್ಲ. ಇಲ್ಲಿ ಕಟ್ಟಿರತಕ್ಕಂಥ ಟ್ಯಾಂಕ್ಸ್ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಲ್ಲ. ಅಲ್ಲದೆ (ಅ) ಪ್ರಶ್ನೆಗೆ ಉತ್ತರವಾಗಿ 1985–86ನೇ ಸಾಲಿನಲ್ಲಿ 2.12 ಲಕ್ಷ ರೂಪಾಯಿಗಳ ಒಂದು ಅಂದಾಜಿನ ಖರ್ಚು ಏನು ಹೇಳಿದ್ದೀರಿ ಈ ಕೆಲಸಗಳು ನನ್ನ ಕ್ಷೇತ್ರದಲ್ಲಿ ಆಗಿಲ್ಲ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇರುವ ಟ್ಯಾಂಕ್ ಖರ್ಚಿನ ಬಗ್ಗೆ ಹೇಳಬೇಕು.

ಎರಡನೆಯದಾಗಿ, ಮೈನರ್ ಇರಿಗೇಷನ್ ಬಗ್ಗೆ ಫೈಫ್ ವರ್ಕ್ಸ್ ಏನು ತೆಗೆದುಕೊಂಡಿದ್ದೀರಿ ಅದನ್ನೂ ಸಹ ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಬಂಡೇಪಲ್ಲಿ ವಿಲೇಜ್ ನನ್ನ ಕ್ಷೇತ್ರಕ್ಕೆ ಸೇರಿಲ್ಲ ಎಂದು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ವಿವರ ತರಿಸುತ್ತೇನೆ. ಅದರಲ್ಲಿ ಏನಾದರೂ ನ್ಯೂನತೆಗಳು ಇದೆ ಎಂದು ಕಂಡುಬಂದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಅದುವರೆಗೆ ಈ ಪ್ರಶ್ನೆಯನ್ನೂ ಸಹ ವಿತ್‌ಹೆಲ್ಡ್ ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಿಗೆ ಬೇಕಾದರೆ 1982, 1983, 1984 ಮತ್ತು 1985 ಈ ಸಾಲಿನಲ್ಲಿ ಎಷ್ಟು ಸ್ಯಾಂಕ್ಷನ್ ಆಗಿದೆ ಅನ್ನುವ ವಿವರಗಳನ್ನು ಕೊಡುತ್ತೇನೆ. I do not want to suppress any information. I will get all detailed information year-wise break up. If you order for withholding the question, I have no objection.

Mr. Speaker.—Yes.

ವಿಷಯ : ದಿನಗೂಲಿ ನೌಕರರನ್ನು ವಜಾ ಮಾಡಿರುವ ಬಗ್ಗೆ

ಪ್ರ. ಸಂಖ್ಯೆ 23 (36) ಶ್ರೀ ಜಿ. ಎಸ್. ದೊಡ್ಡಮೇಟಿ (ರೋಣ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಜಲಾನಯನ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) 1982ನೇ ಸಾಲಿನ ನಂತರ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಸೇರಿದವರನ್ನು ಸದರಿ ಹುದ್ದೆಯಿಂದ ವಜಾ ಮಾಡಿರುವುದು ನಿಜವೆ ;

ಆ) ಸರ್ಕಾರದ ಈ ನಿರ್ಧಾರದಿಂದ ವಜಾ ಮಾಡಲ್ಪಟ್ಟ ಈ ದಿನಗೂಲಿ ನೌಕರರಿಗೆ ಜೀವನ ನಿರ್ವಹಣೆಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದಲ್ಲಿ ಸದರಿ ನೌಕರರ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳು ಏನು ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ತಾ॥ 1-4-1982ರ ನಂತರ ದಿನಗೂಲಿ ನೌಕರರಾಗಿ ಸೇರಿದವರನ್ನು ಸರ್ಕಾರ ವಜಾ ಮಾಡಿದೆ.

ಆ) ಕೆಲವು ಮಂದಿ ಅರ್ಜಿಗಳನ್ನು ಕೊಟ್ಟಿದ್ದಾರೆ.

ಇ) 1-4-1982ರ ನಂತರ ನೇಮಕವಾದ ದಿನಗೂಲಿ ನೌಕರರ ಸಂಖ್ಯೆ ಮತ್ತು ಸೇವಾ ವಿವರಗಳನ್ನು ತರಿಸಿಕೊಳ್ಳಲಾಗುತ್ತದೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—240 ದಿವಸ ಕೆಲಸ ಮಾಡಿದರವರನ್ನು ಖಾಯಂ ಮಾಡುವುದರ ಬಗ್ಗೆ ತಾವು ಗಣನೆಗೆ ತೆಗೆದುಕೊಂಡಿದ್ದೀರಿ. ಅದೇ ರೀತಿ ಉಳಿದವರ ಬಗ್ಗೆಯೂ ಖಾಯಂ ಮಾಡುವುದರ ಬಗ್ಗೆ ಪರಿಶೀಲಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಇದರ ಬಗ್ಗೆ ಪೂರ್ಣ ವಿವರಣೆ ಕೊಟ್ಟರೆ ಒಳ್ಳೆಯದು. ತಾವು ಅನುಮತಿ ಕೊಟ್ಟರೆ ಹೇಳುತ್ತೇನೆ. ಏನೆಂದರೆ 240 ದಿವಸ ಅವರು ಸತತವಾಗಿ ಕೆಲಸ ಮಾಡಿದ್ದರೆ ಅಂಥವರನ್ನು ಕೆಲಸದಿಂದ ವಜಾ ಮಾಡುವುದಿಲ್ಲ ಎನ್ನುವ ಆಶ್ವಾಸನೆಯನ್ನು ಈ ಸಭೆಯಲ್ಲಿ ಕೊಟ್ಟಿದ್ದೇವೆ.

ಆದೇ ರೀತಿಯಾಗಿ ಸರ್ಕಾರ ನಿರ್ಣಯ ಮಾಡಿದೆ. ಹಾಗೆ ನಿರ್ಣಯ ಮಾಡುವಾಗ 1982ರ ಪೂರ್ವದಲ್ಲಿ ಯಾರು ದಿನಗೂಲಿಯಾಗಿ ಕೆಲಸ ಮಾಡುತ್ತಿದ್ದರೋ ಅವರಿಗೆಲ್ಲಾ ಈ ಸರ್ಕಾರೀ ಆಜ್ಞೆ ಅನ್ವಯವಾಗುತ್ತದೆ. ಆದರೆ 1-4-82ರ ಹಿಂದೆ ಈ ಬಗ್ಗೆ ಹಿಂದಿನ ಸರ್ಕಾರ ಏನು ಒಂದು ಬ್ಯಾನ್ ಆರ್ಡರ್ ಹಾಕಿತ್ತು ಅದನ್ನು ನಾವು ತೆಗೆದಿಲ್ಲ. ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. 1-4-82ರ ಪೂರ್ವದಲ್ಲಿ ನೀರಾವರಿ ಇಲಾಖೆ, ರಸ್ತೆ ವಿಭಾಗದಲ್ಲಿ ಮತ್ತು ರಾಷ್ಟ್ರೀಯ ಹೆದ್ದಾರಿ ವಿಭಾಗದಲ್ಲಿ ಒಟ್ಟು 32,858 ಜನ ಕೆಲಸ ಮಾಡುತ್ತಿದ್ದರು. ಅದರಲ್ಲಿ ನಿಯಮಗಳನ್ನು ಮಾಡುವಾಗ ಈರೀತಿ ಮಾಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಯಾರು 240 ದಿವಸ ಸತತವಾಗಿ ಕೆಲಸ ಮಾಡಿದ್ದಾರೆ ಅವರನ್ನು ರೆಗ್ಯುಲರೈಸ್ ಮಾಡಬೇಕು ಬೇರೆಯವರು ಕನಿಷ್ಟ 5 ವರ್ಷ ಕೆಲಸ ಮಾಡಿರಬೇಕು ಎಂದು ಮಾಡಿದ್ದೇವೆ. ಈರೀತಿಯ ಒಂದು ಸರ್ಕಾರೀ ಆಜ್ಞೆಯನ್ನು ಹೊರಡಿಸಿದ್ದೇವೆ. ಅದರ ವ್ಯಾಪ್ತಿಯಲ್ಲಿ ಬರುವಂಥ ಯಾರನ್ನೂ ಕೂಡ ತೆಗೆದುಹಾಕಿಲ್ಲ. ಅಲ್ಲದೆ 1-4-82ರ ನಂತರ ಈಚೆಗೆ ನೇಮಕವಾದ ದಿನಗೂಲಿ ನೌಕರರನ್ನೂ ಸಹ ತೆಗೆದುಹಾಕಿಲ್ಲ.

ಶ್ರೀ ಕೆ. ಹೆಜ್. ಪಾಟೀಲ್.—1-4-82ರ ಹಿಂದೆ ಸೇರಿದಂಥ ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ, 240 ದಿವಸ ಅವರು ಸತತವಾಗಿ ಕೆಲಸ ಮಾಡಿದ್ದರೆ ಅವರನ್ನು ಖಾಯಂ ಮಾಡುವ್ದುದರ ಬಗ್ಗೆ ತಾವು ಏನು ಒಂದು ತಾತ್ವಿಕವಾದ ಧೋರಣೆ ಇಟ್ಟುಕೊಂಡಿದ್ದೀರೋ ಅದನ್ನು ನಾನು ಒಪ್ಪುತ್ತೇನೆ. ಹಾಗೆಯೇ ಬಡವರ ಬಗ್ಗೆ ಅಂತಃಕರಣ ಇರತಕ್ಕಂಥವರು ತಾವು 1-4-82ರ ನಂತರ ಈಚೆಗೆ ನೇಮಕವಾದವರ ಬಗ್ಗೆಯೂ ಅವರನ್ನು ಖಾಯಂ ಮಾಡುವುದನ್ನು ವುನರ್ ಪರಿಶೀಲನೆ ಮಾಡುತ್ತೀರಾ? ಅಂತಃಕರಣ ಇದ್ದುದರಿಂದಲೇ 25 ವರ್ಷಗಳಿಂದ ನೆನಗುದಿಗೆ ಬಿದ್ದಿದ್ದಂಥ ವಿಷಯದ ಬಗ್ಗೆ ಈ ಸರ್ಕಾರ ನಿರ್ಣಯ ತೆಗೆದುಕೊಂಡಿರುವುದು. ತಾವು ಕೂಡ ಒಪ್ಪುತ್ತೀರಿ. ತಾವು ಕೂಡ ಆಡಳಿತದ ಜವಾಬ್ದಾರಿ ಸ್ಥಾನದಲ್ಲಿದ್ದವರು. ಯಾವುದೇ ಕೆಲಸದಲ್ಲಿ ಅಲ್ಲಿ ನಾವು ಕೊಡತಕ್ಕ ಹಣ ಏನಿದೆ ಅದು ಸಿಬ್ಬಂದಿಗೋಸ್ಕರ ಹೋಗುವುದಾದರೆ ಅಂತಹ ಕೆಲಸದಲ್ಲಿ ಇವರನ್ನು ಇಟ್ಟುಕೊಳ್ಳುವುದಾದರೂ ಹೇಗೆ ? ಸ್ಥಳೀಯವಾಗಿ ತಂದೆಯೋ ತಾಯಿಯೋ ಹೆಂಡತಿಯೋ ಯಾರೋ ಸತ್ತು ಹೋಗುತ್ತಾರೆ ಎಂದು ಹೇಳಿ ಒತ್ತಾಯ ಮಾಡಿ ಬಂದಿರುತ್ತಾರೆ, ಉದಾಹರಣೆಗೆ ಹೇಳುವುದಾದರೆ ಒಂದು ಡಿವಿಜನ್ ಆಫೀಸಿನಲ್ಲಿ ಸುಮಾರು 350 ಮಂದಿಯನ್ನು ಕುಳಿತುಕೊಳ್ಳಲಿಕ್ಕೆ ಜಾಗವಿಲ್ಲ ಅಂಥ್ಯದ್ದರಲ್ಲಿ ತೆಗೆದುಕೊಂಡಿದ್ದರು–ಅವರನ್ನು ತೆಗೆದು ಹಾಕಲಾಯಿತು. ಇವುತ್ತು ನಿರುದ್ಯೋಗದ ಸಮಸ್ಯೆ ಏನಿದೆ ಇದರ ಬಗ್ಗೆ ಎಲ್ಲಾ ಪಕ್ಷಗಳ ಕಳಕಳಿ ಇದೆ. ಜ್ವಲಂತ ಸಮಸ್ಯೆ ಮತ್ತು ರಾಷ್ಟ್ರೀಯ ಸಮಸ್ಯೆಯಾಗಿದೆ ಆದರೆ ಈ ಸಮಸ್ಯೆಯನ್ನು ಬಗಹರಿಸತಕ್ಕಂಥ ದ್ದಕ್ಕೆ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳೇ ಮೂಲಸಾಧನ ಎಂದು ಇಟ್ಟುಕೊಳ್ಳುವುದಾದರೆ ಕೆಲಸಕ್ಕೆ ದುಡ್ಡಿಲ್ಲದೇ ಹೋಗುತ್ತದೆ. ಮಾನ್ಯ ಕೃಷ್ಣನ್‌ನವರೂ ನಾನೂ ಮೊನ್ನೆ ಒಂದು ಕಡೆ ಹೋದೆವು. ಒಂದು ಲಕ್ಷ ರೂಪಾಯಿಗಳ ಹಣ ಖರ್ಚು ಮಾಡಬೇಕಾದರೆ ಎಷ್ಟೋ ಸಾರಿ ಯೋಚನೆ ಮಾಡುತ್ತೇವೆ. ಇದರ ಬಗ್ಗೆ ನಾವು ಕುಳಿತು ಚರ್ಚೆ ಮಾಡೋಣ. 3850 ಜನರನ್ನು ನಾನು ಕೊಟ್ಟಂಥ ಆಶ್ವಾಸನೆ ಪ್ರಕಾರ ರೆಗ್ಯುಲರೈಸ್ ಮಾಡಿಲ್ಲ ಎಂದು ಹೇಳಿದರು 23 ಸಾವಿರ ಜನ ಆಗಿರಬೇಕು. ಅದರ ವಿವರವನ್ನು ನಾನು ಕೊಡುತ್ತೇನೆ. ನೀವು ಹೇಳಿದಂಥ ವಿಚಾರವನ್ನು ಗಮದಲ್ಲಿಟ್ಟುಕೊಂಡು ನಮಗೆ ಅವಶ್ಯಕತೆ ಇರತಕ್ಕಂಥದ್ದನ್ನೂ ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ಎಂ, ಎಸ್. ಕೃಷ್ಣನ್.—ಈ ವಿಷಯ ಈ ಹಿಂದೆ ಈ ಮನೆಯಲ್ಲಿ ಪ್ರಸ್ತಾಪಕ್ಕೆ ಬಂದಾಗ ತಾವು ಭರವಸೆ ಕೊಟ್ಟಿದ್ದು ಏನೆಂದರೆ, 1-4-1982ಕ್ಕೆ ಮುಂಚೆ ಯಾರು ಕೆಲಸ ಮಾಡುತ್ತಿದ್ದರು ಅವರೆಲ್ಲರನ್ನೂ ಖಾಯಂ ಮಾಡುತ್ತೇನೆ ಎಂದು ಆದಾದನಂತರ ಸೇರಿದವರನ್ನು ಮನೆಗೆ ಕಳಿಸಿಬಿಡುತ್ತೇವೆ ಎಂದು ತಾವು ಹೇಳಲಿಲ್ಲ. 1-4-1982ಕ್ಕೆ ಮುಂಚೆ ಇದ್ದವರನ್ನು ಖಾಯಂ ಮಾಡುತ್ತೇವೆ ಎಂದು ಹೇಳಿದಿರಿ, ಆದಾದಮೇಲೆ ಕೆಲವರು ಸೇರಿಕೊಂಡು ಕೆಲಸ ಮಾಡುತ್ತಿದ್ದಾರೆ, ಅಂತಹವರನ್ನು ಮನೆಗೆ ಕಳಿಸಿಬಿಡುತ್ತೇವೆ, ಬಾವಿಗೆ ಕಳ್ಳುತ್ತೇವೆ ಎಂದು ಮಂತ್ರಿಗಳು ಹೇಳಲಿಲ್ಲ ; ಹೇಳದೇಹೋದರೂ ಏಕೆ ಹೀಗೆ ಕೆಲಸ ಮಾಡಿದರು ? ಇದರಿಂದ ವಚನಭ್ರಷ್ಟರಾದಂತಾಗಲಿಲ್ಲವೆ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಕೃಷ್ಣನ್‌ರವರ ಕಳಕಳಿ ಮತ್ತು ಅವರ ಸೈದ್ಧಾಂತಿಕವಾದ ನಿಲವು ಇವೆರಡನ್ನೂ ಸಮರ್ಥನೆ ಮಾಡುತ್ತೇನೆ, ಅದಕ್ಕೆ ಅಭಿನಂದನೆ ಸಲ್ಲಿಸಿ ಒಂದು ಮಾತನ್ನು ಹೇಳುತ್ತೇನೆ. ಬ್ಯಾನ್ ಆರ್ಡರ್ ಇದ್ದ ಮೇಲೆ ಈರೀತಿ ಮಾಡುವುದಕ್ಕೆ ಅವಕಾಶವೇ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಮೇಲೆ ನೀವೇ ಹಾಕಿಕೊಂಡಿರಿ.

ಶ್ರೀ ಹೆಚ್. ಡಿ. ದೇವೇಗೌಡ.—ಹಿಂದಿನ ಸರ್ಕಾರದವರು ಹಾಕಿದ್ದುದು. ಮಾನ್ಯ ಖಾರ್ಗೆಯವರು ಇದ್ದಾರೆ, ಅವರಿಗೆ ಗೊತ್ತಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಆ ಗವರ್ನಮೆಂಟ್ ಬ್ಯಾನ್ ಹಾಕಿದರೆ ಅದನ್ನು ನೀವು ತೆಗೆದು ಹಾಕಿ. ತೆಗೆದು ಹಾಕುವುದಕ್ಕೇ ನೀವು ಬಂದಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಇವರ ಗವರ್ನಮೆಂಟನ್ನು ಕೆಟ್ಟ ಗವರ್ನಮೆಂಟ್ ಎಂದು ಒಪ್ಪಿಕೊಂಡ ಮೇಲೆ ನೀವು ತೆಗೆದುಹಾಕಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ನಮ್ಮ ಜೊತೆಯಲ್ಲಿ 10 ವರ್ಷಗಳು ಇದ್ದೀರಿ, ಆಗ ನೀವು ಬಿಟ್ಟು ಬೇರೆಯವರು ಇಲ್ಲ ಎಂದು ಹೇಳಿದಿರಿ. ಈಗ ಈರೀತಿ ಹೇಳುತ್ತಿದ್ದೀರಿ. ನಮ್ಮ ಮೇಲೆ ಪ್ರೀತಿ, ಅವರ ಜೊತೆಗೆ ಲಗ್ನವೇ.

ಶ್ರೀ ಎಂ. ಎಸ್. ಕೃಷ್ಣನ್.—ಇವರ ಹತ್ತಿರ ಪ್ರೀತಿಯೂ ಇಲ್ಲ, ಲಗ್ನವೂ ಇಲ್ಲ. ನಾವು ಇವರನ್ನು ಕೇಳಿ ಅಸೆಂಬ್ಲಿಗೆ ಬರಲಿಲ್ಲ, ಪಾರ್ಟಿ ಕಟ್ಟಲಿಲ್ಲ. ಇಲ್ಲಿಯ ತನಕ ಒಳ್ಳೆಯವರು ಎಂದು ತಿಳಿದು ಕೊಂಡಿದ್ದೆವು, ಈಗ ಕೆಟ್ಟ ದಾರಿಗೆ ಹೋಗಿ ದೇಶವನ್ನೇ ಹಾಳು ಮಾಡುತ್ತಿದ್ದಾರೆ. ಅವರು ತಪ್ಪು ಮಾಡಿದರೂ ತಪ್ಪು ಎಂದು ಹೇಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಹಿರಿಯರಾಗಿ ನ್ಯಾಯವಾಗಿ ಮಾತನಾಡುವುದು ಒಳ್ಳೆಯದು, ಹಿರಿಯರಾಗಿ ಜವಾಬ್ದಾರಿಯುತವಾಗಿ ಮಾತನಾಡಬೇಕು. ಅವರು ಕೆಟ್ಟವರು. ಇವರು ಕೆಟ್ಟವರು ಎಂದು ಹೇಳುವುದು ಸರಿಯಲ್ಲ. ನಮ್ಮದು ತಪ್ಪಿದ್ದರೆ ಶೂಲಕ್ಕೆ ಏರಿಸಲಿ. ಅವರು ಈರೀತಿ ಮಾತನಾಡುವುದು ಫ್ಯಾಷನ್ ಆಗಿಬಿಟ್ಟಿದೆ. ಹಿರಿಯರಾಗಿ ಸಿಕ್ಕಾಪಟ್ಟೆ ಅಲಿಗೇಷನ್ ಮಾಡುವುದು ಸರಿಯಲ್ಲ. ಸ್ಪೆಸಿಫಿಕ್ಕಾಗಿ ಚಾರ್ಜಸ್ ಮಾಡಿ ಯಾರಾದರೂ ತಪ್ಪು ಮಾಡಿದ್ದರೆ ಅವರನ್ನು ಹ್ಯಾಂಗ್ ಮಾಡಿ. ನಿಮ್ಮ ಸರ್ಕಾರ ಬಂದಿದೆ ಯಾರ್ಯಾರು ತಪ್ಪು ಮಾಡಿದ್ದಾರೆ ಅವರನ್ನು ಶೂಲಿಗೆ ಏರಿಸಿ. ಅದನ್ನು ಬಿಟ್ಟು ಕೆಟ್ಟ ಸರ್ಕಾರ, ಅಂತಹ ಸರ್ಕಾರ ಎಂದು ಹೇಳುವುದು ಸರಿಯಲ್ಲ. ನೀವು ಒಳ್ಳೆಯ ಜನ ಎನ್ನುವುದು ಗೊತ್ತಿದೆ. ಏಕೆಂದರೆ 10 ವರ್ಷಗಳ ಕಾಲ ನಮ್ಮ ಜೊತೆಯಲ್ಲಿದ್ದವರು.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಖಾರ್ಗೆಯವರು ನಮ್ಮ ಪಕ್ಷದ ಬಗ್ಗೆ ಇಲ್ಲಸಲ್ಲದ ಅಪಾದನೆ ಮಾಡಿದ್ದಾರೆ, ಅದಕ್ಕೆ ನಾವು ಉತ್ತರ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಲ್ಲಸಲ್ಲದ ಅಪಾದನೆ ಮಾಡಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ಒಂದು ದಿವಸ ಚರ್ಚೆ ಇಟ್ಟುಕೊಳ್ಳಿ. ಹಿಂದಿನ ಸರ್ಕಾರ ಏನು ಮಾಡಿದೆ. ಈ ಸರ್ಕಾರ ಏನು ಮಾಡಿದೆ ಎನ್ನುವುದರ ಬಗ್ಗೆ ಒಂದು ದಿವಸ ಚರ್ಚೆ ಇಟ್ಟು ಕೊಳ್ಳೋಣ ; ಪಟ್ಟಿ ಮಾಡೋಣ .....

(ನಾಲ್ಕೈದು ಜನ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಬಹಳ ಒಳ್ಳೆಯ ಸೂಚನೆ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಖಾರ್ಗೆಯವರು ಮಾತನಾಡುವಾಗ ನಾನು ಸುಮ್ಮನೆ ಇದ್ದೆ.

ಅಧ್ಯಕ್ಷರು.—ಮಂತ್ರಿಗಳು ಉತ್ತರ ಹೇಳಲಿಕ್ಕೆ ಎದ್ದಿದ್ದಾರೆ, ಈರೀತಿ ಇಂಟರ್‌ಫಿಯರ್ ಆಗುವುದು ಸರಿಯಲ್ಲ. ನೀವು ಯಾರೇ ಮಾತನಾಡಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೆ, ತಾವು ತಮಗೆ ಅವಕಾಶ ಕೊಡಬೇಕು, ಇಲ್ಲದೇ ಹೋದರೆ ಈರೀತಿ ಮಾತನಾಡತಕ್ಕ ಸದಸ್ಯರಿಗೆ ಎಚ್ಚರಿಕೆ ಕೊಡಬೇಕು ; ಮತ್ತು ಈ ಮನೆಯಲ್ಲಿ ಒಂದು ಮಿತಿಯಲ್ಲಿ ಮಾತನಾಡುವಂತೆ ತಾವು ನೋಡಿಕೊಳ್ಳಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ನಾವೇನೂ ಆಕ್ಷೇಪಣೆ ಎತ್ತುತ್ತಾ ಇರಲಿಲ್ಲ. ಸನ್ಮಾನ್ಯ ಕೃಷ್ಣನ್‌ರವರು ಒಳ್ಳೆಯ ಜವಾಬ್ದಾರಿಯುತರಾದ ಹಿರಿಯ ಸದಸ್ಯರು ಅವರು ಎದ್ದು ನಿಂತು ಮಾತನಾಡುವಾಗ ಜವಾಬ್ದಾರಿಯುತವಾಗಿ ವಿಚಾರವನ್ನು ಮುಂದಿಡುತ್ತಾರೆ ಎಂದು ನಾವು ಬಹಳ ಕುತೂಹಲದಿಂದ, ಗಂಭೀರತೆಯಿಂದ ಕೇಳಿದ್ದೇವೆ. ಕೆಲವೊಮ್ಮೆ ಅವರು ಏನು ಮಾಡುತ್ತಾರೆ ಎಂದರೆ, ವೈಯುಕ್ತಿಕವಾಗಿ ಹೇಳುತ್ತಾ, ಆ ಪಕ್ಷ ಕೆಟ್ಟದ್ದು ಎಂದು ಹೇಳುವುದು ಸರಿಯಲ್ಲ. ಎಲ್ಲಾ ಪಕ್ಷಗಳಲ್ಲೂ ಕೆಟ್ಟವರೂ. ಒಳ್ಳೆಯವರೂ ಇರುತ್ತಾರೆ, ಕೆಟ್ಟ ಕೆಲಸ ದೇಶದಲ್ಲಿ

ನಡೆಯುತ್ತದೆ. ಆದರೆ ಒಮ್ಮೆಲೇ ಸಾರಾಸಗಟಾಗಿ ನಮ್ಮ ಪಕ್ಷ ಕೆಟ್ಟುಬಿಟ್ಟಿದೆ ಎಂದು ಹೇಳಿದರೆ ಅದನ್ನು ನಾವು ನುಂಗಿಕೊಂಡು ಕುಳಿತುಕೊಳ್ಳಲಿಕ್ಕೆ ಆಗುವುದಿಲ್ಲ. ಕೆಟ್ಟವರು ಯಾರು, ಏನು ಎಂದು ಹೇಳಲಿ. ದಯಮಾಡಿ ಮಾನ್ಯ ಕೃಷ್ಣನ್‌ರವರೇ ತಿಳಿದುಕೊಳ್ಳಬೇಕಿತ್ತು. ಇತ್ತೀಚೆಗೆ ಅವರಿಗೆ ತಿಳಿದುಕೊಳ್ಳತಕ್ಕ ಶಕ್ತಿ ಕಡಿಮೆಯಾಗಿದೆಯೋ, ಏಕೋ ಜನತಾ ಪೋಬಿಯಾ ಬಂದುಬಿಟ್ಟಿದೆಯೋ, ಏನೋ ಅವರಿಗೆ ಮಂಕು ಬಂದುಬಿಟ್ಟಿದೆ. ಆ ಮಂಕನ್ನು ತಾವು ಹೊರಡಿಸಬೇಕು. ಇಲ್ಲದೇಹೋದರೆ ಅವರೇ ತಿಳಿದುಕೊಳ್ಳಬೇಕು. ಮಂಕನ್ನು ಬಿಡಿಸಲಿಕ್ಕೆ ನಮಗೆಲ್ಲಾ ಗೊತ್ತಿದೆ. ಆದ್ದರಿಂದ ದಯಮಾಡಿ ಮಾನ್ಯ ಸದಸ್ಯರು ಮಾತನಾಡುವಾಗ ಎಚ್ಚರಿಕೆಯಿಂದ ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು.—ನೀವು ಮಾತನಾಡುವುದು ರಿಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೆ, ನೀವು ಮಾತನಾಡುವಾಗ ಮತ್ತೊಬ್ಬರನ್ನು ರೇಗಿಸುವಂತೆ ಮಾತನಾಡಬಾರದು. ಏನಾದರೂ ಕೊಶ್ಚನ್ ಬೇಕಾದರೆ ಕೇಳಿ, ಈರೀತಿ ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೆ, ಬಡವರ ಜೀವನದ ಸಮಸ್ಯೆಯನ್ನು ಚರ್ಚೆ ಮಾಡ ತಕ್ಕ ಸಮಯದಲ್ಲಿ.....

(ಗೊಂದಲ)

ಅಧ್ಯಕ್ಷರು.—ಈರೀತಿ ಎಲ್ಲಾ ಸದಸ್ಯರು ಎದ್ದು ನಿಂತು ಮಾತನಾಡಿದರೆ ನಾನು ಯಾರಿಗೂ ಅಲೋ ಮಾಡುವುದಿಲ್ಲ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ಮಾನ್ಯ ವೀರಪ್ಪ ಮೊಯಿಲಿಯವರು ಒಂದೆರಡು ಮಾತ ಗಳನ್ನು ಆಡಿದ್ದಾರೆ. ಅದು ರೆಕಾರ್ಡ್‌ನಲ್ಲಿ ಹೋಗಿದೆ.....

(ಗೊಂದಲ)

ಶ್ರೀ ಪಂಪಾಪತಿ.—ಇವರು ಬಹಳ ದೊಡ್ಡ ಸಾಹಿತಿಗಳು, ಇವರಿಂದ ನಾವೇನೂ ಕಲಿಯಬೇಕಾಗಿಲ್ಲ

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ಮಾನ್ಯ ಮೊಯಿಲಿಯವರು ಕೆಲವೊಂದು ಮಾತುಗಳನ್ನು ಆಡಿದ್ದಾರೆ ಆದ್ದರಿಂದ ನಾನೂ ಮಾತನಾಡಬೇಕಾಗಿದೆ. ಕಾಂಗ್ರೆಸ್ ಸದಸ್ಯರು ನಾನು ಹೇಳಿದ ಮಾತಿಗೆ ಬಹಳ ಆಕ್ರೋಶಗೊಂಡಿದ್ದಾರೆ.....

(ಗೊಂದಲ)

ಅಧ್ಯಕ್ಷರು.—ಆ ವಿಷಯ ಬಿಡಿ.

ಶ್ರೀ ಎಂ. ಎಸ್. ಕೃಷ್ಣನ್.—ಅದನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋದರು ಎನ್ನುವುದು ತಮಗೆ ಗೊತ್ತಿದೆ. ಅನರಿಂದಲೂ ನಾವು ಏನೂ ಪಡೆಯಬೇಕಾದ್ದಿಲ್ಲ. ಇವರಿಂದಲೂ ನಾವು ಏನೂ ಪಡೆಯಬೇಕಾದ್ದಿಲ್ಲ.

(ಗೊಂದಲ)

ಶ್ರೀ ಪಾಂಪಾಪತಿ.—ಅಧ್ಯಕ್ಷರೆ, ಇವರಿಂದ ನಾವು ಏನು ಕಲಿಯಬೇಕಾಗಿದೆ ?

(ಗೊಂದಲ)

ಶ್ರೀ ಪರಮಕ್ಕಿ ರತ್ನಾಕರ್.—ತಾವೆಲ್ಲರೂ ಹಿರಿಯ ಸದಸ್ಯರು, ಆ ರೀತಿಯಲ್ಲಿ ಮಾತನಾಡ ಬಾರದು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ಈರೀತಿ ಎಲ್ಲರೂ ಮಾತನಾಡುವುದು ರೆಕಾರ್ಡ್‌ಗೆ ಹೋಗುವು ದಿಲ್ಲ. ನಾನು ಎದ್ದು ನಿಂತಾಗ ಮಾನ್ಯ ಸದಸ್ಯರೆಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು. ಮಾತನಾಡ ಲಿಕ್ಕೆ ಎಲ್ಲಾ ಮಾನ್ಯ ಸದಸ್ಯರು ಎದ್ದು ನಿಂತಾಗ ನಾನು ಯಾರ ಹೆಸರು ಕರೆಯುತ್ತೇನೆ ಅವರು ಮಾತ್ರ ಮಾತನಾಡಬೇಕು. ಉಳಿದ ಸದಸ್ಯರು ಕುಳಿತುಕೊಳ್ಳಬೇಕು. ತಾವೆಲ್ಲರೂ ಒಟ್ಟಿಗೆ ಮಾತನಾಡುವಾಗ ಏನಾದರೂ ಹೇಳಿದ್ದರೆ, ಅದನ್ನು ಎಕ್ಸ್‌ಪಂಜ್ ಮಾಡಬೇಕಾಗುತ್ತದೆ. ಅಲ್ಲದೆ ನೀವು ಹೇಳಿದ್ದು ಪೇಪರ್ ನಲ್ಲಿ ಬರುವುದಿಲ್ಲ. ಆದ್ದರಿಂದ ನಾನು ಯಾವ ಸದಸ್ಯರ ಹೆಸರನ್ನು ಕರೆಯುತ್ತೇನೆ ಅವರು ಮಾತ್ರ ಮಾತನಾಡಬೇಕು. ನಾನು ಮಾತನಾಡುವಾಗ ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಂಡು ಕೇಳ ಬೇಕು. ಹಿರಿಯ ಸದಸ್ಯರಿಂದ ಕೆಲವೊಂದು ಅನುಭವ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಇಲ್ಲಿಗೆ

ಸ್ಟಾಪ್ ಮಾಡೋಣ. ಅಕಸ್ಮಾತ್ ಯಾರಾದರೂ ಏನಾದರೂ ಟೀಕೆಗಳನ್ನು ಮಾಡಿದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ಇವೊತ್ತು ಸಾಯಂಕಾಲ ಆಗಬಹುದು ಅಥವಾ ನಾಳೆ ಆಗಬಹುದು ತಾವು ಬರೆದು ಕಳುಹಿಸಿದರೆ ಸಾಕು ಅದನ್ನು ಎಕ್ಸ್‌ಪೆಂಜ್ ಮಾಡುತ್ತೇನೆ. ಇನ್ನೂ ಬಹಳ ಪ್ರಶ್ನೆಗಳು ಇವೆ. ಅವು ಗಳನ್ನು ಲ್ಯಾಪ್ಸ್ ಮಾಡುವುದು ಬೇಡ. ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ ದಯ ಮಾಡಿ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರದ ನಿಲುವನ್ನು ಪುನರುಚ್ಚಾರ ಮಾಡುತ್ತೇನೆ. ದಿನಾಂಕ 1-4-1982ರಿಂದ ಈಚೆಗೆ ನೇಮಕ ಮಾಡಿರತಕ್ಕ ದಿನಗೂಲಿ ನೌಕರರನ್ನು ಖಾಯಂಗೊಳಿಸ ತಕ್ಕದ್ದು ಸಧ್ಯಕ್ಕಂತೂ ಸಾಧ್ಯವಿಲ್ಲ.

ಶ್ರೀ ವೆಂಕಟರಾಮಯ್ಯ.—ಅಧ್ಯಕ್ಷರೆ, ನಾವು ಪ್ರೊಟೆಸ್ಟ್ ಮಾಡಬೇಕಾಗುತ್ತದೆ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ರೂಲ್ 307 ಮತ್ತು 308ರಲ್ಲಿ ಏನು ಹೇಳಿದೆ ಎನ್ನುವುದದನ್ನು ಓದಿ ತಿಳಿದುಕೊಳ್ಳಬೇಕು. ತಾವು ಬಹಳ ಆಕ್ಟೀವ್ ಇದ್ದೀರಿ, ಬಹಳ ಚೆನ್ನಾಗಿ ಮಾತನಾಡುತ್ತೀರಿ. ಆದ್ದರಿಂದ, ತಾವು ರೂಲ್ಸ್ ಚೆನ್ನಾಗಿ ಓದಿ ತಿಳಿದುಕೊಳ್ಳಬೇಕು.

Sub.—Population of SCs. and STs. in the State.

Q. No. 24 (114) Dr. B.H. Thippeswamy (Bharamasagara).—will the Minister for Social Welfare be pleased to state.

a) The total population of Scheduled Castes/Scheduled Tribes in Karnataka during Independence in 1947, and the population as per 1981 Census ;

b) The Percentage of literacy in 1947 and in 1985 in general and Scheduled Castes/Scheduled Tribes in particular ?

Sri V. L. Patil (Minister for Social Welfare).—

a) The total population of Scheduled Castes/Scheduled Tribea in Karnataka during 1947 is not available and as per 1981 census the population of Scheduled Castes was 55,95,353 and Scheduled Tribes was 18,25,203.

b) The percentage of literacy of Scheduled Castes/Scheduled Tribes and of General population in 1947 and 1985 are not available.

ಡಾ॥ ಬಿ.ಎಂ. ತಿಪ್ಪೇಸ್ವಾಮಿ,—ಅಧ್ಯಕ್ಷರೆ, ಸರ್ಕಾರದಲ್ಲಿ ಮಾಹಿತಿ ಇಲ್ಲ ಎಂದು ಹೇಳುತ್ತಿದ್ದಾರೆ ಸರಿಯಾಗಿ ವಿವರ ಹೇಳದೆ ಇದ್ದರೆ ಹೇಗೆ ?

ಶ್ರೀ ವಿ.ಎಲ್. ಪಾಟೀಲ್.—ಸೆನ್‌ಸಸ್ 1971 ಮತ್ತು 1981ರಲ್ಲಿ ಆಗಿದೆ. 1971ರ ಸೆನ್‌ಸಸ್ ಪ್ರಕಾರ ಲಿಟರರಿ ಪರ್‌ಸೆಂಟೇಜ್ ಜನರಲ್ ಪಾಪ್ಯುಲೇಷನ್ 31.52, ಷೆಡ್ಯೂಲ್ ಕ್ಯಾಸ್ಟ್ 31.89 ಷೆಡ್ಯೂಲ್ಡ್ ಟ್ರೈಬ್ಸ್ 14.85,, 1981ರ ಸೆನ್‌ಸಸ್ ಪ್ರಕಾರ ಲಿಟರರಿ ಜನರಲ್ ಪಾಪ್ಯುಲೇಷನ್ 88.46, ಷೆಡ್ಯೂಲ್ಡ್ ಕ್ಯಾಸ್ಟ್ 20.59, ಷೆಡ್ಯೂಲ್ಡ್ ಟ್ರೈಬ್ 20.14.

ಡಾ॥ಬಿ. ಎಂ. ತಿಪ್ಪೇಸ್ವಾಮಿ.—ಅಧ್ಯಕ್ಷರೆ. ನಾನು ಕೇಳಿರತಕ್ಕ ಎರಡು ಪ್ರಶ್ನೆಗಳಿಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ಉತ್ತರ ಪಡೆಯಬಹುದಾಗಿತ್ತು. ನಾನು ಕೇಳಿರತಕ್ಕ ಪ್ರಶ್ನೆಗಳು ಬಹಳ ಸಿಂಪಲ್ ಆಗಿವೆ. ಇದಕ್ಕೆ ಹೆಚ್ಚಿನ ಇನ್‌ಫರ್‌ಮೇಷನ್ ಬೇರೆ ಕಡೆಯಿಂದ ತರಿಸಿ ಉತ್ತರ ಕೊಡಬೇಕಾದ ಅವಶ್ಯಕತೆ ಇಲ್ಲ. 1961ರಿಂದ ಈಚೆಗೆ ಜಾತಿ ಸೂಚಕ ಕೊಟ್ಟಿಲ್ಲ. ಇವರು ಉತ್ತರ ಕೊಟ್ಟಿರತಕ್ಕದ್ದು ಟೋಟಲ್ ಪಾಪ್ಯುಲೇಷನ್. 1981ರ ಸೆನ್‌ಸಸ್ ಪ್ರಕಾರ ಎಷ್ಟೆಷ್ಟು ಲಕ್ಷ ಇದಾರೆ ಎನ್ನುವುದನ್ನು ಉತ್ತರದಲ್ಲಿ ಹೇಳಿದ್ದಾರೆ. 1961ರ ಹಿಂದೆ ಏನಿತ್ತು ಆ ಲೆಕ್ಕ ಇಲ್ಲ. ಇನ್ನು ಎರಡನೆ ಯದಾಗಿ ಹರಿಜನ ಗಿರಿಜನರಲ್ಲಿ ವಿದ್ಯಾಭ್ಯಾಸ ಎಷ್ಟು ಪರ್‌ಸೆಂಟ್ ಮುಂದುವರಿದಿದೆ ಎಂದು ಕೇಳಿದ್ದಕ್ಕೆ ಸರಿಯಾದ ಸಂಖ್ಯೆ ಹೇಳದಿದ್ದರೆ ನಾವು ಏತಕ್ಕೆ ಪ್ರಶ್ನೆ ಕೇಳಬೇಕು. 1991ರ ಸೆನ್‌ಸಸ್ ದಾಸ್ ರಿಪೋರ್ಟ್‌ನಲ್ಲಿ ಎಲ್ಲಾ ಡೀಟೈಲ್ಸ್ ಕೊಟ್ಟಿದ್ದಾರೆ. ಇಂಡಿಯಾ 1984ರಲ್ಲಿ ಡೀಟೈಲ್ಸ್ ರಿಪೋರ್ಟ್